**ದಿನಾಂಕ:01.08.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಶ್ರೀಮತಿ ಬಿ.ಟಿ.ಎಸ್., 12 ನೇ ಪ್ರತಿವಾದಿ ಪರ ವಕೀಲರಿಂದ**

ನಾನು ಎಸ್.ಆರ್.ಎಸ್., ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನ್ನ ತಂದೆಯವರು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿ ಕಂಪನಿಯೊಂದರಲ್ಲಿ ಮ್ಯಾನೇಜರ್ ಆಗಿ ಕಾರ್ಯ ಮಾಡುತ್ತಿದ್ದಾರೆ. ನನ್ನ ತಂದೆಗೆ ನನ್ನ ತಾಯಿಯನ್ನು ಹೊರತುಪಡಿಸಿ ಮತ್ತೊಂದು ಮಹಿಳೆ ಮತ್ತು ಮಕ್ಕಳೊಂದಿಗೆ ಸಂಸಾರವನ್ನು ನಡೆಸುತ್ತಿದ್ದಾರೆ ಎಂದರೆ ಸರಿ. ನನಗೂ ಮತ್ತು ಪುಲ್ಲಪ್ಪನಾಯ್ಕನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ 1, 3 ರಿಂದ 11 ನೇ ಪ್ರತಿವಾದಿಯವರು ಒಟ್ಟು ಕುಟುಂಬದ ಅವಶ್ಯಕತೆಗಾಗಿ ದಾವಾ ಅನುಸೂಚಿ ಸ್ವತ್ತನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ಸದರಿ ಕ್ರಯವನ್ನು ನಾನು ಪ್ರಶ್ನಿಸುವಂತಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಒಟ್ಟು ಕುಟುಂಬದ ಎಲ್ಲ ಆಸ್ತಿಗಳನ್ನು ಸೇರಿಸದೇ ದಾವೆಯನ್ನು ಹೂಡಿರುವುದರಿಂದ ನಾನು ಸಲ್ಲಿಸಿರುವ ಈ ದಾವೆಯು ಊರ್ಜಿತವಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 4 ನೇ ಖಂಡಿಕೆಯಲ್ಲಿ ತಿಳಿಸಿರುವಂತೆ ನಾನು ಪುಲ್ಲಪ್ಪನಾಯ್ಕನ ಮೊಮ್ಮಗಳಾದ ಕಾರಣ ದಾವಾ ಅನುಸೂಚಿ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿ ನನಗೆ ಹಕ್ಕು ಇದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನಾವು ಒಟ್ಟಾಗಿ ಅನುಭವಿಸಿಕೊಂಡು ಸ್ವಾಧೀನದಲ್ಲಿ ಇದ್ದೇವು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ 1 ರಿಂದ 3 ಮತ್ತು 8 ನೇ ಪ್ರತಿವಾದಿಯ ಒಟ್ಟು ಕುಟುಂಬದಲ್ಲಿ ನನ್ನನ್ನು ನಿರ್ಲಕ್ಷ್ಯ ಮಾಡಿಕೊಂಡು ಬಂದಿದ್ದರಿಂದಾಗಿ ನಾನು ದಾವಾ ಸ್ವತ್ತಿನಲ್ಲಿ ನನ್ನ ತಾಯಿಗೆ ಇರುವ ಭಾಗದ ಹಿಸ್ಸಾ ಹಕ್ಕನ್ನು ಕೇಳಿದ್ದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭಾಗವನ್ನು ಏಪ್ರಿಲ್ 2021 ರಲ್ಲಿ ಕೇಳಿದ್ದೇನು ದಿನಾಂಕ ನನಗೆ ನೆನಪಿಲ್ಲ. ಸದರಿ ವಿಚಾರವನ್ನು ನಾನು 1 ರಿಂದ 3 ಮತ್ತು 8 ನೇ ಪ್ರತಿವಾದಿಯವರಿಗೆ ಕೆರೆಯಾಗಲಹಳ್ಳಿ ಗ್ರಾಮದಲ್ಲಿ ಕೇಳಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಎಲ್ಲ ಅಂಶಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. 12 ನೇ ಪ್ರತಿವಾದಿಯವರು ಖರೀದಿ ಮಾಡಿರುವ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಪ್ರಸ್ತುತ ದಾವೆಯಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ.